ಪಿ. ಜಯವಂತ ಪೈ, ಕುಂದಾಪುರ
ಪಾಕಶಾಲೆಗೂ, ಪಾಠಶಾಲೆಗೂ ವ್ಯತ್ಯಾಸವೇನು?




ಪಾಕಶಾಲೆಯಲ್ಲಿ ಪ್ಲೇಟ್ ತೊಳೆಯುತ್ತಾರೆ. ಪಾಠಶಾಲೆಯಲ್ಲಿ ಪ್ರತಿವರ್ಷವೂ ಅದೇ ಪಾಠದ ಪ್ಲೇಟ್!

ರಾಜೀವ್ ಎನ್. ಮಾಗಲ್, ಸಕಲೇಶಪುರ
ಅಪರಾಧಿಗಳಿಗೆ ಕೊಡುವ ಭದ್ರತೆಗೂ, ಮಂತ್ರಿಗಳಿಗೆ ಕೊಡುವ ಭದ್ರತೆಗೂ ಏನು ವ್ಯತ್ಯಾಸ?
ಇಬ್ಬರಿಗೂ ಹೊಡೆಯುವುದರಲ್ಲಷ್ಟೇ ವ್ಯತ್ಯಾಸ – ಅವನಿಗೆ ಪೆಟ್ಟು, ಇವನಿಗೆ ಸಲ್ಯೂಟು.

ಸಿ.ಕೆ. ಗಣಪ್ಪನವರ, ಮುಂಡರಗಿ
ರಾಜಕಾರಣಿಗಳನ್ನು ಮಾತ್ರ ಊಸರವಳ್ಳಿಗೆ ಹೋಲಿಸುವುದು ಏಕೆ?
ರಾಜಕಾರಣಿಯಲ್ಲೇ ಧರ್ಮಗುರು, ವರ್ತಕ, ವಂಚಕ, ದ್ರೋಹಿಗಳ ಗುಣಗಳು ಸೇರಿರುವುದರಿಂದ.

ವಿ. ಹೇಮಂತಕುಮಾರ್, ಬೆಂಗಳೂರು
ಕಿಕ್ ಕೊಡೋ ಎಣ್ಣೆಗೂ, ಲುಕ್ ಕೊಡೋ ಹೆಣ್ಣಿಗೂ ವ್ಯತ್ಯಾಸವೇನು?



ಎಣ್ಣೆ ಬದುಕನ್ನು ಉರುಳಿಸುತ್ತದೆ; ಹೆಣ್ಣು ಅರಳಿಸುತ್ತಾಳೆ.

ಮಲ್ಲಿಕಾರ್ಜುನ, ಸುರಧೇನುಪುರ
ದೇವಸ್ಥಾನ ಸಾರ್ವತ್ರಿಕ. ದೇವರು?
'ಸಂಕಟ ಬಂದಾಗ...' ಆದ್ದರಿಂದ, ದೇವರು ಸಾಂದರ್ಭಿಕ.

ಬೂಕನಕೆರೆ ವಿಜೇಂದ್ರ, ಮೈಸೂರು
ಸಾಲ ಮಾಡಿ ತುಪ್ಪ ತಿನ್ನುವವರನ್ನು ಶ್ರೀಮಂತರೆನ್ನಬಹುದಾ?
ನಮ್ಮಲ್ಲಂತೂ ಕೋಟ್ಯಂತರ ಸಾಲ ಮಾಡಿ ಮನ್ನಾ ಮಾಡಿಸಿಕೊಳ್ಳುವವರೂ ಶ್ರೀಮಂತರೇ.

ರತ್ನಜ, ಮೈಸೂರು
ಹಸಿವು ಚೆನ್ನಾಗಿದ್ದರೆ ಊಟವೂ ಚೆನ್ನಾಗಿರುತ್ತದೆ. ಹಾಸಿಗೆ ಚೆನ್ನಾಗಿದ್ದರೆ ನಿದ್ರೆ?
ನಿದ್ರಾಂಗನೆ ಏಕ್‌ದಂ ತಿಕ್ಕಲು. ಅವಳು ನೆಮ್ಮದಿ ಇರುವವರ ಬಳಿಯಷ್ಟೇ ಸುಳಿಯುವುದು.

ಬಿ.ಆರ್. ಉಷಾ, ಕೆನಡಾ
ಭುಜಬಲಕ್ಕೂ, ಬುದ್ಧಿಬಲಕ್ಕೂ ಇರುವ ವ್ಯತ್ಯಾಸವೇನು?
ಬಹುತೇಕ ಸಂದರ್ಭಗಳಲ್ಲಿ ಭುಜಬಲವು ಬುದ್ಧಿಬಲದ ಆಳು.

ಜಗದೀಶ ಬಿ. ಹೊಸೂರು, ಮೈಸೂರು
ವಿಷದ ಹಾವಿಗೇ ಹಾಲೆರೆಯುವ ಮನುಜ ವಿಷವಿಲ್ಲದ ಪ್ರಾಣಿಗಳನ್ನು ಕೊಲ್ಲುವುದೇಕೆ?
ಚೀನೀಯರು ಸ್ನೇಕ್ ಕರಿ ತಿನ್ನುತ್ತಾರೆ. ಇಲ್ಲಷ್ಟೇ ಭಯದಿಂದ ಭಕ್ತಿ, ಬಲಹೀನರತ್ತ ಕತ್ತಿ.

ಸಿಹಿಮೊಗೆ ರಮೇಶ್, ಮೈಸೂರು
ಶ್ರೀಸಾಮಾನ್ಯ ಜಾರನಾದರೆ ತಿರಸ್ಕೃತ. ಉನ್ನತ ಸ್ಥಾನದಲ್ಲಿರುವವನು ಜಾರನಾದರೆ ಆದರಣೀಯ?
ಹೆಣ್ಣಿನ ಹಿಂದೆ ಬಿದ್ದ ರಕ್ಕಸನ ವಧೆ, ಸುರನಿಗೆ ದೇವೇಂದ್ರ ಪಟ್ಟ ಸುರನಿಯಮ.

ವಸುಧಾ ಜೈಶಂಕರ್, ಬೆಂಗಳೂರು
ಮಠಾಧೀಶನು ತನ್ನನ್ನು 'ನಾವು' ಎಂದು ಬಹುವಚನದಲ್ಲಿ ಹೇಳುವ ಔಚಿತ್ಯವೇನು?
ದೇವನು ಅವರಲ್ಲಿ ಗರ್ಭಸ್ಥನಂತೆ. ಅಂತೆಯೇ ಮಠಾಧೀಶ, ಗರ್ಭಿಣಿ ಮಾತ್ರ 'ನಾವು' ಎನ್ನಬಹುದಂತೆ.

ಸಿ.ಎಸ್. ಸೂರ್ಯಪ್ರಕಾಶ್, ಬೆಂಗಳೂರು
ಮಾಡೋದೆಲ್ಲ ಮಾಡಿ 'ಷಡ್ಯಂತ್ರದ ಬಲೆ' ಎಂಬ ಕವಚ ಪಡೆಯುವ ರಾಜಕಾರಣಿಯನ್ನು ಏನೆನ್ನಬೇಕು?
ಏನು ಬೇಕಾದರೂ ಅನ್ನಿ. ಕತ್ತೆ ಚರ್ಮದಂತಹ ಮನಸ್ಸಿಗೆ ಏನೇನೂ ತಟ್ಟದು.

ಮೋಹನದಾಸ್ ನಾಯಕ್, ಊರಿಲ್ಲ
ನಾಯಕ ನಟ, ನಟಿಯರಿಗೆ ಅಂಗರಕ್ಷಕರು ಯಾಕೆ ಬೇಕು?
ಅವರ ಅಂಗಗಳನ್ನು ಮುಟ್ಟಲು ಹಾತೊರೆಯುವ ಜನರಿಂದ ದೂರವಿರಿಸಲು.


## ಬಹುಮಾನಿತ ಪ್ರಶ್ನೆ

ಬಿ.ಸಂ. ಸುಬ್ಬಣ್ಣ, ಬೆಂಗಳೂರು
ಕೆರೆ, ಗೋಮಾಳ ಗುಳುಂ; ಜಲ ಮಲಿನ; ಆದರೂ ದೇಶ ಅಭಿವೃದ್ಧಿಯಾಗುತ್ತಿದೆ. ನಂಬಬಹುದೆ?
ಅಭಿವೃದ್ಧಿಯೆಂದರೆ ಗುಣವಲ್ಲ, ಹಣ ಎಂದು ಸಮ್ಮತಿಸಿದವರು ನಂಬಬಹುದು.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ
ಹುಟ್ಟಿದ ಯಾವುದೇ ಜೀವಿ ಮಣ್ಣು ಸೇರಬೇಕು. ಆದರೂ ನೆಲದ ಫಲವತ್ತತೆ ಕ್ಷೀಣಿಸಿತೇಕೆ?
ಮಣ್ಣಿನೊಡನೆ ಮಣ್ಣಾಗದ್ದನ್ನೂ ಹೂತದ್ದೇ ಕಾರಣವಂತೆ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಅಂಗೈಯಲ್ಲಿ ಕೂದಲು ಹುಟ್ಟುವುದಿಲ್ಲ. ಏಕೆ?
ತೀರ್ಥ ಪ್ರಸಾದಗಳನ್ನು ನೆಕ್ಕುವಾಗ ಉದುರಿ ಗಂಟಲಿಗೆ ಸೇರದಿರಲೆಂದು.

ಅನಸೂಯಾ ಟಿ., ಕೇದಿಗೆಮನೆ
ಮನುಷ್ಯನಿಗೆ ಆಸೆ ಮುಗಿಯಲು ಏನು ಮಾಡಬೇಕು ಗುರುಗಳೆ?



ಆಯುಸ್ಸು ಮುಗಿಯಬೇಕು.

ಗುರುಶಿವಮೂರ್ತಿ, ಬೆಂಗಳೂರು
ಸಾಧನೆಯನ್ನು ಬೆಟ್ಟ ಮತ್ತು ಗುಡ್ಡಕ್ಕೆ ಏಕೆ ಹೋಲಿಸುತ್ತಾರೆ?
ಅವುಗಳಷ್ಟೇ ಸ್ಥಿರವಾದ್ದರಿಂದ.

ಎನ್.ವಿ. ಭಟ್, ಶಿವಮೊಗ್ಗ
ಇಂದಿನ ಪ್ರಜ್ಞಾವಂತರಿಂದಲೇ ಸಮಾಜದಲ್ಲಿ ಹೆಚ್ಚಿನ ಅನ್ಯಾಯ. ಹೀಗಾದರೆ ಮುಂದೇನು?
ಇದೇ ಜಗನಿಯಮ. ದುರ್ಯೋಧನನಿಗೆ ಸಿಕ್ಕಷ್ಟು ಬೆಂಬಲ ಯುಧಿಷ್ಠಿರನಿಗಿರಲಿಲ್ಲ.

ಕೆ. ರಂಗಸ್ವಾಮಿ, ತುಮಕೂರು
ಇತ್ತೀಚೆಗೆ ಜೈಲ್ ಮತ್ತು ಬೇಲ್‌ಗಳೇ ಟ್ರೆಂಡ್ ಆಗಿವೆಯಲ್ಲ, ಏಕೆ?
ಕಳ್ಳರನ್ನು ನಾಯಕರನ್ನಾಗಿ ಆರಿಸಿದ್ದೇ ಪ್ರಮುಖ ಕಾರಣವಂತೆ.

■ ರಾಮ್